# ವೀರ ಮಾತೆ



ನೂರಾರು ವರ್ಷಗಳ ಹಿಂದೆ ಪಾಂಡಿಯವೆಂಬ ರಾಜ್ಯವಿತ್ತು. ಅದು ಅತ್ಯಂತ ಸಂಪದ್ಭರಿತವಾಗಿತ್ತು. ರಾಜನು ಸದ್ಗುಣಿಯಾಗಿದ್ದು ಸದಾ ತನ್ನ ಪ್ರಜೆಗಳ ಹಿತಚಿಂತನೆ ಮಾಡುತ್ತಿದ್ದ. ಅಕ್ಕಪಕ್ಕದ ರಾಜ್ಯಗಳ ರಾಜರೊಡನೆ ಅವನು ಉತ್ತಮ ಬಾಂಧವ್ಯವನ್ನು ಇರಿಸಿಕೊಂಡಿದ್ದ. ಹೀಗಾಗಿ ಅವನು ಬಲಿಷ್ಠವಾದ ಸೈನ್ಯವನ್ನು ಕಟ್ಟಲು ಹೋಗಿರಲಿಲ್ಲ.

ಆದರೆ ನೆರೆಯ ರಾಜನೊಬ್ಬ ಪಾಂಡಿಯ ರಾಜ್ಯದ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯಬೇಕೆಂಬ ದುರಾಸೆಯಿಂದ ಅದರ ಮೇಲೆ ಆಕ್ರಮಣ ಮಾಡಿದ. ಸೈನಿಕರು ಕಡಿಮೆ ಇದ್ದಿದ್ದರಿಂದ ಪಾಂಡಿಯ ರಾಜ ಹಳ್ಳಿ ಹಳ್ಳಿಗೂ ತನ್ನ ಸೈನ್ಯಾಧಿಕಾರಿಗಳನ್ನು ಕಳಿಸಿ ಬಲಿಷ್ಠ ಯುವಕರನ್ನು ಸೈನ್ಯಕ್ಕೆ ಭರ್ತಿ ಮಾಡಿಕೊಂಡು ಅವರನ್ನು ಯುದ್ಧಕ್ಕೆ ಕಳಿಸುತ್ತಿದ್ದ. ಒಬ್ಬ ಸೈನ್ಯಾಧಿಕಾರಿ ಒಂದು ಹಳ್ಳಿಗೆ ಬಂದ. ಅಲ್ಲಿ ಒಬ್ಬಳು ಮುದುಕಿ ಇದ್ದಳು. ಆಕೆಗೆ ಒಬ್ಬನೇ ಮಗ. ಅವನು ಅತ್ಯಂತ ಬಲಿಷ್ಠನೂ, ಧೈರ್ಯಶಾಲಿಯೂ ಆಗಿದ್ದ. ಅವನ ವಯಸ್ಸು ಇಪ್ಪತ್ತೈದು. ಅವನ ಹೃದಯದಲ್ಲಿ ದೇಶಭಕ್ತಿ ತುಂಬಿ, ತುಳುಕುತ್ತಿತ್ತು. ತಾನು ಸೈನ್ಯಕ್ಕೆ ಸೇರಿ ವೀರಾವೇಶದಿಂದ ಹೋರಾಡಿ ತನ್ನ ರಾಜ್ಯಕ್ಕೆ ಗೆಲುವು ತಂದು ಕೊಡುತ್ತೇನೆಂದು ಹೆಮ್ಮೆಯಿಂದ ಸೈನ್ಯಾಧಿಕಾರಿಗಳಿಗೆ ತಿಳಿಸಿದ.

ಅದಕ್ಕೆ ಸೈನ್ಯಾಧಿಕಾರಿ, 'ನಿನ್ನ ತಂದೆ– ತಾಯಿ ಏನು ಮಾಡುತ್ತಿದ್ದಾರೆ?' ಎಂದು ಪ್ರಶ್ನಿಸಿದ.

ಅದಕ್ಕೆ ಆ ಯುವಕ 'ನನ್ನ ತಂದೆ ನಾನು ಚಿಕ್ಕವನಿದ್ದಾಗಲೇ ಯಾವುದೋ ವಾಸಿಯಾಗದ ರೋಗಕ್ಕೆ ಬಲಿಯಾಗಿ ತೀರಿ ಹೋದರಂತೆ. ವಯಸ್ಸಾದ ತಾಯಿ ಇದ್ದಾಳೆ. ಆಕೆಯೇ ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡಿ ನನ್ನನ್ನು ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿದ್ದು' ಎಂದ.

'ಹಾಗಾದರೆ ನಿನ್ನನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದು ಸಾಧ್ಯವಿಲ್ಲ. ವಯಸ್ಸಾದ ನಿನ್ನ ತಾಯಿಯನ್ನು ಸಾಕುವುದು ನಿನ್ನ ಕರ್ತವ್ಯ. ಒಂದು ವೇಳೆ ನೀನು ಯುದ್ಧದಲ್ಲಿ ವೀರಮರಣವನ್ನಪ್ಪಿದರೆ ನಿನ್ನ ತಾಯಿಯನ್ನು ಸಾಕುವವರಾರು? ನೀನು ಮನೆಗೆ ವಾಪಸ್ಸು ಹೋಗು' ಎಂದು ಆ ಸೈನ್ಯಾಧಿಕಾರಿ ಆ ಯುವಕನಿಗೆ ತಿಳಿಸಿದ.

ಆ ಯುವಕ ಮುಖ ಸಣ್ಣಗೆ ಮಾಡಿಕೊಂಡು ಮನೆಗೆ ಬಂದ. ತಾಯಿಗೆ ನಡೆದ ವಿಷಯವನ್ನೆಲ್ಲಾ ತಿಳಿಸಿದ. ಆಗ ಆಕೆ ಮಗನ ಕೈಗೆ ಸ್ವಲ್ಪ ಹಣ ಕೊಟ್ಟು 'ಅಕ್ಕಿ ಖಾಲಿಯಾಗಿದೆ. ಅನ್ನ ಮಾಡಲು ಅಂಗಡಿಗೆ ಹೋಗಿ ಸ್ವಲ್ಪ ಅಕ್ಕಿ ತೆಗೆದುಕೊಂಡು ಬಾ' ಎಂದು ಹೇಳಿದಳು.

ಅವನು ಅತ್ತ ಹೋದ ಕೂಡಲೇ, ಇತ್ತ ಚೀಟಿಯೊಂದನ್ನು ಬರೆದು ಮುಷ್ಟಿಯಲ್ಲಿ ಟ್ಟುಕೊಂಡು, ವಿಷ ಸೇವಿಸಿ ಮಲಗಿಬಿಟ್ಟಳು. ಮಗ ಅಕ್ಕಿ ತೆಗೆದುಕೊಂಡು ಬಂದಾಗ ತಾಯಿ ಸತ್ತು ಬಿದ್ದಿದ್ದನ್ನು ನೋಡಿ ತುಂಬಾ ದುಃಖಪಟ್ಟ. ಅವನು ಸೈನ್ಯಾಧಿಕಾರಿಯನ್ನು ಮನೆಗೆ ಕರೆದುಕೊಂಡು ಬಂದ. ಆ ಸೈನ್ಯಾಧಿಕಾರಿ ಆ ದೃಶ್ಯವನ್ನು ಕಂಡು ದಿಗ್ಭ್ರಾಂತನಾದ.

ಆ ವೃದ್ಧೆಯ ಕೈಯಲ್ಲಿದ್ದ ಚೀಟಿಯನ್ನು ತೆಗೆದುಕೊಂಡು ಓದತೊಡಗಿದ. ಅದರಲ್ಲಿ ಹೀಗೆ ಬರೆಯಲಾಗಿತ್ತು– 'ಮಗು, ನಮ್ಮ ರಾಜರು ತುಂಬಾ ಒಳ್ಳೆಯವರು, ನನಗೂ ವಯಸ್ಸಾಯಿತು. ಇನ್ನೆಷ್ಟು ಕಾಲ ನಾನು ಬದುಕಿಯೇನು? ಬದುಕಿ ನಾನು ಮಾಡುವುದಾದರೂ ಏನು? ನಾನು ನನ್ನ ದಾರಿಯನ್ನು ನೋಡಿಕೊಂಡಿದ್ದೇನೆ. ನೀನು ದುಃಖಪಡಬೇಡ. ತಾಯಿಗಿಂತ ತಾಯಿನಾಡು ದೊಡ್ಡದು, ನೀನು ಸೈನ್ಯಕ್ಕೆ ಸೇರಿಕೊಂಡು ಧೈರ್ಯ, ಶೌರ್ಯಗಳಿಂದ ಹೋರಾಡು. ದುಷ್ಟ ಉದ್ದೇಶದಿಂದ ಬಂದ ವೈರಿ ಸೈನ್ಯವನ್ನು ಕೊಚ್ಚಿ ಹಾಕಿರಿ. ಜಯ ನಿಮ್ಮದಾಗಲಿ. ನನ್ನ ಆಶೀರ್ವಾದ ಸದಾ ನಿನ್ನ ಮೇಲಿರುತ್ತದೆ'.

ಆ ಪತ್ರವನ್ನು ಓದಿದ ಸೈನ್ಯಾಧಿಕಾರಿಯ ಕಣ್ಣಾಲಿಗಳು ತುಂಬಿ ಬಂದವು. 'ಎಂತಹ ವೀರ ಮಾತೆ ಈಕೆ' ಎಂದು ಅವನು ಉದ್ಗರಿಸಿ ಆಕೆಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದ.

ಕೊನೆಗೆ ಆ ಯುವಕನನ್ನು ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳಲಾಯಿತು. ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಪಾಂಡಿಯದ ಸೈನಿಕರು ಜೀವದ ಹಂಗು ತೊರೆದು ಅಸಾಧಾರಣ ಶಕ್ತಿ ಮತ್ತು ಯುಕ್ತಿಗಳಿಂದ ಹೋರಾಡಿದ್ದರಿಂದ ಜಯ ಅವರಿಗೇ ಲಭಿಸಿತು.

**–ಬಿ. ಪಾಂಡುರಂಗಯ್ಯ, ದಾವಣಗೆರೆ**

## ನಿಮಗೆಷ್ಟು ಗೊತ್ತು

## ಸದಾ ಸ್ನಾನದ್ದೇ ಧ್ಯಾನ ಈ ಹಕ್ಕಿಗೆ!



ಹಳದಿ ದೇಹ, ಕಪ್ಪು ರೆಕ್ಕೆಯ ಆಕರ್ಷಕ ವರ್ಣ ಸಂಯೋಜನೆ ಹೊಂದಿರುವ ಅರಿಶಿಣ ಬುರುಡೆ ಹಕ್ಕಿಯು ಸದಾ ಕಾಲ ಶುಭ್ರವಾಗಿದ್ದು, ಚಟುವಟಿಕೆಯಿಂದ ಕೂಡಿರುತ್ತದೆ. ಸಂಘ ಜೀವನ ಬಯಸುವ ಈ ಹಕ್ಕಿಯು ಚಿಕ್ಕ ಚೊಕ್ಕ ಸಂಸಾರವನ್ನು ಬಹಳ ಪ್ರೀತಿಸುವ ಪ್ರವೃತ್ತಿ ಹೊಂದಿದೆ. ಸದಾಕಾಲ ಚಟುವಟಿಕೆಯಿಂದಿರುವ ಅರಿಶಿಣ ಬುರುಡೆಯು ಶುಭ್ರತೆಗೆ ಹೆಚ್ಚು ಒತ್ತುಕೊಡುವ ಹಕ್ಕಿ. ಹರಿಯುವ ನೀರಾದರೂ ಸರಿ ಅಥವಾ ನಿಂತ ನೀರಾದರೂ ಸರಿ, ನೀರು ಶುದ್ಧವಾಗಿದ್ದರೆ ಸಾಕು ಆ ನೀರಿನಲ್ಲಿ ಪದೇಪದೇ ಮುಳುಗೇಳುತ್ತದೆ. ಆ ಮೂಲಕ ತನ್ನ ದೇಹವನ್ನು ಸದಾಕಾಲ ಶುಭ್ರವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತದೆ.

**– ಪ.ನಾ.ಹಳ್ಳಿ.ಹರೀಶ್ ಕುಮಾರ್**